

ಚಿತ್ರ: ಈಶ್ವರ ಬಡಿಗೇರ

## ಜ್ಞಾ ಪಕಶಾಲೆ

ಅಮೆರಿಕದ ಬಾಸ್ಕೆಟ್‌ಬಾಲ್ ಆಟದ ಒಂದು ಒಕ್ಕೂಟಕ್ಕೆ 'ಎನ್ಬಿಎ' ಎಂದು ಕರೆಯುತ್ತಾರೆ. ಇದರ ಪೂರ್ಣ ರೂಪ 'ನ್ಯಾಷನಲ್ ಬಾಸ್ಕೆಟ್ಬಾಲ್ ಅಕಾಡೆಮಿ' ಅಂತ. ಇದರ ಪ್ರತಿಷ್ಠಿತ ಆಟಗಾರರು ಕ್ರೀಡಾಜಗತ್ತಿನ ಅತ್ಯಂತ ಶ್ರೀಮಂತ ಕ್ರೀಡಾಪಟುಗಳ ಪಟ್ಟಿಯಲ್ಲಿ ಕಾಣಸಿಗುತ್ತಾರೆ. ಕನಿಷ್ಠ ಆರೂವರೆ ಅಡಿಗಳ ಈ ದೈತ್ಯರು ಬಾಸ್ಕೆಟ್‌ಬಾಲ್ ಪಿಚ್ಚಿನ ಈ ತುದಿಯಿಂದ ಆ ತುದಿಯಲ್ಲಿರುವ ಬಾಸ್ಕೆಟ್ಟಿಗೆ ಚೆಂಡನ್ನು ಒಗೆಯಬಲ್ಲರು. ನಿಂತ ಕಡೆ ಜಿಗಿದು ಬಾಸ್ಕೆಟ್ಟಿನ ಮೇಲಿನಿಂದ ಕೈ ಬಿಟ್ಟು ಚೆಂಡನ್ನು ಬಾಸ್ಕೆಟ್ಟಿಗೆ ಹಾಕಿ ಅಂಕ ಪಡೆದುಕೊಳ್ಳುತ್ತಾರೆ. ಇದರಲ್ಲಿ ಹಲವಾರು ತರಹದ ಚೆಂಡನ್ನು ಎಸೆಯುವ ಬಗೆಗಳಿವೆ. ಉದಾಹರಣೆಗೆ ಡಾಂಕಿಂಗ್, ಬಾಂಕ್ ಶಾಟ್, ಬ್ರಿಕ್, ಇತ್ಯಾದಿ.

'ಎನ್ಬಿಎ' ಆಟದ ಪೀಠಿಕೆಯ ಹಿನ್ನೆಲೆ ಅರ್ಥ ಮಾಡಿಕೊಳ್ಳಲು, ನಮ್ಮ ಉದ್ಯಾನನಗರಿ (ಮಾಜಿ) ಬೆಂಗಳೂರಿನ ಪರಿಸ್ಥಿತಿ ನೋಡಬೇಕು. ಬೆಂಗಳೂರಿನ ನಮ್ಮ ಮನೆ, ಹಳೆಯ ಕಾಲದ ಮನೆಗಳಂತೆ ಮುಂದೆ ಸಾಕಷ್ಟು ಖಾಲಿ ಜಾಗ, ಅದರಲ್ಲಿ ಹಲವಾರು ತರಹದ ಹೂವಿನ ಹಾಗೂ ಹಣ್ಣಿನ ಗಿಡಗಳಿಂದ ಕೂಡಿತ್ತು. ನಮ್ಮ ತಂದೆಯವರ ತರುವಾಯ ನಾವು ಅಣ್ಣತಮ್ಮಂದಿರು ಒಂದಾಗಿ ಫ್ಲಾಟ್ ಸಂಸ್ಕೃತಿಗೆ ಮೊರೆಹೋಗಿ ನಾಲ್ಕು ಫ್ಲಾಟ್ ಕಟ್ಟಿಸಿಕೊಂಡು, ನಾನು ಎರಡನೇ ಮಹಡಿಯಲ್ಲಿ ವಾಸಿಸಲು ಶುರುಮಾಡಿದ್ದೇನೆ. ಇತ್ತೀಚೆಗೆ ಎಂದಿನಂತೆ ಬೆಳಿಗ್ಗೆ 5.45ಕ್ಕೆ ಎದ್ದು, ಮುಖ ತೊಳೆದು, ವಾಕಿಂಗ್ ಹೊರಡಲು ವಾಕಿಂಗ್ ಶೂ ಧರಿಸಲು ಮೆಟ್ಟಿಲ ಮೇಲೆ ಕುಳಿತಿದ್ದಾಗ ಮುಂದೆ ಇರುವ ಸಣ್ಣ ಬಾಲ್ಕನಿಯಲ್ಲಿ ಏನೋ ಬಿದ್ದಂತಾಗಿ, ಶಬ್ದ ಬಂದಿತು. ಕುತೂಹಲದಿಂದ ನೋಡಿದರೆ, ಸಣ್ಣದಾಗಿ ಸುತ್ತಿ ಒಂದು ಹುರಿ ಕಟ್ಟಿದ ಆ ದಿನದ 'ಡೆಕ್ಕನ್ ಹೆರಾಲ್ಡ್' ಪತ್ರಿಕೆ! ಇದೆಲ್ಲಿಂದ ಬಂದು ಬಿತ್ತು ಎಂದು ಬಗ್ಗಿ ನೋಡಿದರೆ, ನಮ್ಮ ಮನೆಗೆ ಪತ್ರಿಕೆ ಹಾಕುವ ಹುಡುಗ ಟಿವಿಎಸ್ ಮೊಪೆಡ್‌ನಲ್ಲಿ ಮುಂದಿನ ಮನೆಗೆ ಹೊರಡುತ್ತಿದ್ದ. ಕೆಳಗಡೆ ರಸ್ತೆಯಿಂದ ಎರಡನೇ ಅಂತಸ್ತಿಗೆ ಗುರಿಯಿಟ್ಟು ಪೇಪರನ್ನು ಒಗೆದ ಅವನ ಚಾಣಾಕ್ಷತೆಗೆ ಆಶ್ಚರ್ಯ ಪಟ್ಟೆ. ಜೊತೆಗೆ ಹಿಂದೆಂದೂ ಗಮನಿಸಿರದ ಈ ರೀತಿಯ ಪೇಪರ್ ಹುಡುಗರನ್ನು ಅವತ್ತಿನಿಂದ ನನ್ನ ಬೆಳಗಿನ ವಾಕಿಂಗ್ ಸಮಯದಲ್ಲಿ ಗಮನಿಸಲು ಆರಂಭಿಸಿದೆ.

ಅತ್ಯಾಕರ್ಷಕ ರೀತಿಯ ಅನೇಕಾನೇಕ ಕಲಾಕಾರರು ನನ್ನ ಕಣ್ಣಿಗೆ ಕಂಡುಬಂದರು. ಮೊದಲಿಗೆ ಇವರು ಬಳಸುವ ವಾಹನಗಳು – ಹೆಚ್ಚಾಗಿ ಸೈಕಲ್ಲಿನಲ್ಲಿ ಬರುವ ಹುಡುಗರಾದರೆ, ಕೆಲವರು ಟಿವಿಎಸ್ ಮೊಪೆಡ್‌ನಲ್ಲಿ ಬರುತ್ತಾರೆ. ಇನ್ನೂ ಕೆಲವರು ಗೇರ್ ಇಲ್ಲದ ಹೊಂಡ ಆಕ್ಟಿವ ರೀತಿಯ ಸ್ಕೂಟರ್ ಮೇಲೆ. ಆದರೆ, ಎಲ್ಲರೂ ಅತ್ಯದ್ಭುತ ರೀತಿಯ ಬಾಸ್ಕೆಟ್‌ಬಾಲ್ ಆಟಗಾರರೇ. ಬಹು ಚಾಣಾಕ್ಷತನದಿಂದ ಆ ಪೇಪರನ್ನು ಅದರೊಳಗೇ ಸುತ್ತಿ ಅಥವ ಕೆಲವೊಮ್ಮೆ ಸಣ್ಣ ಹುರಿಯಲ್ಲಿ ಕಟ್ಟಿ, ಗುರಿ ಇಟ್ಟು ಎಸೆಯಲು ಅನುಕೂಲವಾಗುವಂತೆ ಒಂದು ರಾಕೆಟ್ ರೀತಿ ಮಾಡಿ ಎಲ್ಲಿಂದಲಾದರೂ ಬೀಸಿ ಒಗೆದರೆ, ತನ್ನ ಗುರಿ ಮುಟ್ಟುವಂತೆ ಅದನ್ನು ತಯಾರಿ ಮಾಡಿಕೊಂಡಿರುತ್ತಾರೆ. ನಂತರ ಇವರ ಬಾಸ್ಕೆಟ್‌ಬಾಲ್ ಆಟ ಶುರು– ಕೆಲವೊಮ್ಮೆ ತಮ್ಮ ವಾಹನದಲ್ಲಿ ಕುಳಿತೇ ಆಟಗಳು, ಕೆಲವೊಮ್ಮೆ ವಾಹನದಿಂದ ಇಳಿದು. ಕೆಲವೊಮ್ಮೆ ಜೋಡಿ ಆಟಗಳೂ ನಡೆಯುತ್ತವೆ. ಮುಂದೆ ಕುಳಿತು ಸ್ಕೂಟರ್ ಚಾಲಕ ಬೇರೆಯಾದರೆ, ಹಿಂದೆ ಕುಳಿತು ಬಾಸ್ಕೆಟ್‌ಗೆ ಗುರಿ ಇಟ್ಟು ಒಗೆಯುವನೇ ಬೇರೆ ಇರುತ್ತಾನೆ. ಮೇಲೆ ಹೇಳಿದ ಡಾಂಕಿಂಗ್, ಬಾಂಕ್ ಶಾಟ್, ಬ್ರಿಕ್ ಇತ್ಯಾದಿಯ ಬಾಸ್ಕೆಟ್‌ಬಾಲ್ ಆಟದ ಎಲ್ಲಾ ಬಗೆಯ ನಮೂನೆಗಳು ಕಾಣಸಿಗುತ್ತವೆ.

ಇವರ ಬಾಸ್ಕೆಟ್‌ಬಾಲ್ ಆಟ ಮೊದಲನೇ ಅಥವಾ ಎರಡನೇ ಮಹಡಿಯ ಮನೆಯ ಗ್ರಾಹಕನ ತನಕ ಸೀಮಿತ. ಅಪರೂಪಕ್ಕೊಮ್ಮೆ ಮೂರನೇ ಮಹಡಿಯ ಗ್ರಾಹಕನೂ ಇವರ ಆಟಕ್ಕೆ ಬಾಸ್ಕೆಟ್ಟಾಗಬಹುದು. ಮೊದಲನೇ ಅಥವಾ ಎರಡನೇ ಮಹಡಿಯ ಮನೆಯಾದರೆ, ಗುರಿ ತಪ್ಪುವುದು ಬಹಳ ಅಪರೂಪ. ಗುರಿ ತಪ್ಪಿದರೂ ಅವರಿಗೆ ಅದರ ಬಗ್ಗೆ ಕಾಳಜಿಯೇ ಇರುವುದಿಲ್ಲ. ಎಸೆಯುವುದಷ್ಟೇ ತಮ್ಮ ಕೆಲಸ ಎಂಬಂತೆ ಮುನ್ನಡೆಯುತ್ತಿರುತ್ತಾರೆ. ಈ ರೀತಿ ಗುರಿ ತಪ್ಪಿದ ಹಲವಾರು ಸಂದರ್ಭಗಳು ನನ್ನೊಂದಿಗೇ ಆಗಿವೆ. ಏಕೆಂದರೆ, ನಾನು ಮೊದಲೇ ಹೇಳಿದಂತೆ ನನ್ನ ವಾಸ ಎರಡನೇ ಮಹಡಿ. ಹಲವಾರು ಬಾರಿ ಇವರ ಗುರಿ ತಪ್ಪಿದ ಪೇಪರುಗಳು ಪಕ್ಕದ ಮನೆಯ ಕಿಟಕಿಯ ಸಜ್ಜೆ ಮೇಲೋ ಅಥವಾ ಕೆಳಗಿರುವ ಸಣ್ಣ ಓಣಿಯಲ್ಲೋ ಬಿದ್ದಿರುವುದುಂಟು. ಅದರ ಕೋಪವನ್ನು ನಾವು ತಿಂಗಳಿಗೊಮ್ಮೆ ಪೇಪರ್ ಹಣ ಸಂಗ್ರಹಿಸಲು ಬರುವ ಏಜೆನ್ಸಿ ಮಾಲೀಕನ ಮುಂದಿಟ್ಟಾಗ ಒಂದು ಸಾರಿಯೊಂದಿಗೆ (ಇಂಗ್ಲಿಷ್ ಸಾರಿ) ಮುಗಿಯುತ್ತದೆ. ಮತ್ತದೇ ಕತೆ – ಮತ್ತದೇ ಸಾರಿ (ಇಂಗ್ಲಿಷ್).

ನಾನು ಮೊದಲು ವಾಸವಿದ್ದ ಮುಂಬೈನಲ್ಲಾಗಲೀ ಅಥವಾ ಈಗ ವಾಸವಿರುವ ಅಹಮದಾಬಾದಿನಲ್ಲಾಗಲೀ ಈ ತೊಂದರೆ ನನಗೆ ಕಂಡುಬಂದಿಲ್ಲ. ಇವೆರಡೂ ಜಾಗದಲ್ಲಿ ನನ್ನ ವಾಸ ಫ್ಲಾಟಿನಲ್ಲೆ. ಮುಂಬೈನಲ್ಲಿ ಐದನೇ ಮಹಡಿ ಹಾಗೂ ಅಹಮದಾಬಾದಿನಲ್ಲಿ ನಾಲ್ಕನೇ ಮಹಡಿ. ಇವೆರಡೂ ಕಡೆ ಪೇಪರ್ ಹಾಕುವ ಹುಡುಗರು ಲಿಫ್ಟಿನಲ್ಲಿ ಅತ್ಯಂತ ಮೇಲಿನ ಮಹಡಿಗೆ ಹೋಗಿ ಅಲ್ಲಿಂದ ಮೆಟ್ಟಿಲುಗಳ ಮುಖಾಂತರ ಒಂದೊಂದೇ ಮಹಡಿ ಇಳಿಯುತ್ತ ಬಂದು, ಆಯಾ ಮನೆಯ ಬಾಗಿಲಿಗೆ ಪೇಪರ್ ಹಾಕಿ, ಕೆಲಸ ಮುಗಿಸುತ್ತಾರೆ. ನಾನು ಗಮನಿಸಿರುವ ಮತ್ತೊಂದು ವಿಷಯವೆಂದರೆ, ಬೆಂಗಳೂರಿನಲ್ಲಿ ಹಲವಾರು ಫ್ಲಾಟುಗಳಿರುವ ಇಡೀ ಒಂದು ಕಟ್ಟಡಕ್ಕೆ ಒಬ್ಬನೇ ಪೇಪರ್ ವಿತರಿಸುವವನು ಬಹಳ ಕಮ್ಮಿ. ಆದರೆ, ಮುಂಬೈನಲ್ಲಿ ಹಾಗೂ ಅಹಮದಾಬಾದಿನಲ್ಲಿ ಅದೇ ರೂಢಿ.

ಇವರ ಬಾಸ್ಕೆಟ್‌ಬಾಲ್ ಆಟದ ವೈಖರಿ ಹಾಗೂ ಅದಕ್ಕಿಂತಲೂ ಹೆಚ್ಚಿಗೆ, ಗುರಿ ತಪ್ಪಿದ ಪೇಪರಿನ ಬಗ್ಗೆ ನಿಷ್ಕಾಳಜಿಯ ಮನೋಭಾವ ನನ್ನನ್ನು ಸುಮಾರು ಮೂವತ್ತೈದು ವರುಷಗಳ ಹಿಂದಿನ ನನ್ನ ಹುಟ್ಟೂರಾದ ಮೈಸೂರಿಗೆ